ಶ್ರೀ ಸಿದ್ದರಾಮಯ್ಯ :— ಇದಕ್ಕೆ ಶ್ರೀ ರೇವಣ್ಣನವರೇ ಉತ್ತರ ಕೊಡಬೇಕಾಗುತ್ತದೆ. ಅವರು ಬಂದಮೇಲೆ ಉತ್ತರ ಕೊಡುತ್ತಾರೆ.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಅಧ್ಯಕ್ಷರೆ, ಶ್ರೀ ರೇವಣ್ಣನವರು ರಾಜೀನಾಮೆ ಪತ್ರವನ್ನು ಮಾನ್ಯ ಸಿದ್ದರಾಮಯ್ಯನವರ ಕೈಯಲ್ಲಿಯೇ ಕೊಟ್ಟಿದ್ದಾರೆಂದು ಒಂದು ಪ್ರಮುಖ ಪತ್ರಿಕೆಯಲ್ಲಿ ಬಂದಿದೆ. ನನಗೆ ಗೊತ್ತಿಲ್ಲವೆಂದು ಈಗ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ :— ಶ್ರೀ ರೇವಣ್ಣನವರು ನನಗೆ ರಾಜೀನಾಮೆ ಪತ್ರವನ್ನು ಕೊಟ್ಟಿಲ್ಲ. ಅವರಿಗೆ ಆರೋಗ್ಯ ಸರಿಯಿಲ್ಲವೆಂದು ನನಗೆ ಗೊತ್ತಿದೆ ಮತ್ತು ಮಾನ್ಯ ಅಧ್ಯಕ್ಷರಿಗೆ ಕೂಡ ಅವರು ಕಾಗದ ಬರೆದಿದ್ದಾರೆ. ಶ್ರೀ ರೇವಣ್ಣನವರು ವಿಧಾನಪರಿಷತ್ತಿನಲ್ಲಿ ಇದ್ದಾರೆಂದು ನನಗೆ ಈಗತಾನೇ ತಿಳಿದುಬಂದಿದೆ. ಆದ್ದರಿಂದ ಅವರು ರಾಜೀನಾಮೆ ಕೊಟ್ಟಿಲ್ಲವೆಂದು ತಮಗೆಲ್ಲಾ ಗ್ಯಾರಂಟಿ ಆಗಿರಬಹುದೆಂದು ಭಾವಿಸುತ್ತೇನೆ.

(ಬ) ಆಳಂದ ತಾಲ್ಲೂಕಿನಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ.

ಶ್ರೀ ಸುಭಾಶ್ ರುಕ್ಮಯ್ಯ ಗುತ್ತೇದಾರ್ (ಆಳಂದ) :— ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಆಳಂದ ತಾಲ್ಲೂಕಿನ ನಿಂಬರಗಾ ಗ್ರಾಮದಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಹೆಚ್ಚು ಇರುವುದು ಕಂಡುಬಂದಿದೆಯೆಂದು ಮೊನ್ನೆ ನಾನು ಕೆ.ಡಿ.ಪಿ. ಮೀಟಿಂಗ್ ಮಾಡುದಾಗ ಆ ಮೀಟಿಂಗ್‌ನಲ್ಲಿ ಡಾಕ್ಟರ್‌ಗಳು ಹೇಳಿದ್ದಾರೆ. ಈ ಫ್ಲೋರೈಡ್ ಅಂಶ ಜಾಸ್ತಿಯಾದ್ದರಿಂದ ಆ ನೀರನ್ನು ಕುಡಿಯತಕ್ಕಂಥ ಜನರಿಗೆ 'ಫ್ಲೋರೋಸೀಸ್'ಎನ್ನುವಂಥ ರೋಗ ಬಂದಿದೆ. ಆದ್ದರಿಂದ ಕುಡಿಯುವ ನೀರನ್ನು ಬದಲಾಯಿಸಿ ಬೇರೆ ಎಲ್ಲಿಂದಾರಾದರೂ ನೀರು ತಂದು ಪೂರೈಸಬೇಕು ಮತ್ತು ಆ ರೋಗ ಬಂದವರಿಗೆ ಏನು ಚಿಕಿತ್ಸೆ ಮಾಡುತ್ತೀರಿ ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು) :— ಮಾನ್ಯ ಅಧ್ಯಕ್ಷರೆ ಸುಮಾರು ಕೊಳವೆ ಬಾವಿಗಳಿಂದ ನೀರು ಪೂರೈಕೆ ಮಾಡತಕ್ಕಂಥ ವ್ಯವಸ್ಥೆ ಮಾಡಿದಾಗ, ಭೂಮಿಯ ಒಳಪದರದ ಮೂಲಕವಾಗಿ ಈ ಫ್ಲೋರೋಡ್ ಕರೆಂಟು ಹೆಚ್ಚು ಇರತಕ್ಕಂಥ ನೀರು ಬರುತ್ತಾ ಇದೆ. ಈ ಫ್ಲೋರೈಡ್ ಅಂಶ 1.5 ಪಿ.ಪಿ.ಎಂ.ಗಿಂತ ಹೆಚ್ಚು ಇದ್ದರೆ ಅದು ಕುಡಿಯಲಿಕ್ಕೆ ಯೋಗ್ಯವಾದಂಥ ನೀರು ಅಲ್ಲಮೆಂದು ಪರಿಗಣಿಸಿದ್ದಾರೆ. ಮತ್ತು 17 ಜಿಲ್ಲೆಗಳಲ್ಲಿ ವ್ಯಾಪಕವಾದ ವಿಚಾರವನ್ನು ಕಂಡಿದ್ದೇವೆ. ತಮ್ಮ ಆಳಂದ ತಾಲ್ಲೂಕಿನ ಈ

ಗ್ರಾಮದಲ್ಲೂ ಕೂಡ 2.5ಕಿಂತಲೂ ಹೆಚ್ಚಿಗೆ ಇದೆಯೆಂಬ ವರದಿ ಬಂದಿದೆ. ಇದಕ್ಕೆ ಶುದ್ಧೀಕರಣ ಯಂತ್ರಗಳನ್ನಳವಡಿಸುವುದೊಂದೇ ಮಾರ್ಗ. ಅದನ್ನು ಹಂತಹಂತವಾಗಿ ಅಳವಡಿಸುತ್ತೇವೆ.

(ಓ) ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಕರ್ನಾಟಕ ದರ್ಶನ ಕಾರ್ಯಕ್ರಮದಲ್ಲಿ ಆಗಿರುವ ಗೊಂದಲ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ (ಅಂಕೋಲ) :— ನಿನ್ನೆ, ಮೊನ್ನೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ದರ್ಶನಕೊಸ್ಕರ ಅಲ್ಲಿಯ ರೈತರನ್ನು ಕರೆದುಕೊಂಡು ಹೋಗಲು ಕೃಷಿ ಇಲಾಖೆ ಯೋಜಿಸಿತ್ತು. ಅದರಂತೆ, 1250 ರೂಗಳನ್ನು ರೈತರು ಕೊಡುವುದು, ಉಳಿದ 1250 ರೂ.ಗಳನ್ನು ಇಲಾಖೆಯು ಭರಿಸುವುದೆಂದೂ ಹೇಳಲಾಗಿತ್ತು. ಇವತ್ತು ಬೆಳಿಗ್ಗೆ ನನ್ನ ಕ್ಷೇತ್ರದಿಂದ ನನಗೆ ಫೋನ್ ಮಾಡಿ ವಿಷಯ ತಿಳಿಸಿದ ಮೇರೆಗೆ, ನಿನ್ನೆ ಅಲ್ಲಿ ಸಾಕಷ್ಟು ಗೊಂದಲ, ಅವ್ಯವಸ್ಥೆಗಳಾಗಿ, ಸರಿಯಾದ ಬಸ್ ನೀಡದೆ ಗೊಂದಲಗಳಾಗಿರುವುದರಿಂದ ಯಾರು ನೀಜವಾಗಿ ಹಣವನ್ನು ಕೊಟ್ಟಿದ್ದಾರೆಯೋ, ಅವರು ಕರ್ನಾಟಕ ದರ್ಶನಕ್ಕೆ ಹೋಗಲಿಲ್ಲ. ಅದನ್ನು ಬಿಟ್ಟು ಇಲಾಖೆಯವರು ಸಿಕ್ಕಿದವರನ್ನು ಕರೆದುಕೊಂಡು ಹೋಗಿದ್ದಾರೆ. ಈ ರೀತಿ ಕರ್ನಾಟಕ ದರ್ಶನದಂತಹ ಕಾರ್ಯಕ್ರಮದಲ್ಲಿ ಆಯ್ಕೆಯಾದ ರೈತರಿಗೆ ಯೋಗ್ಯವಾದ ವ್ಯವಸ್ಥೆಯನ್ನು ಅಲ್ಲಿಯ ಅಧಿಕಾರಿಗಳು ಮಾಡುವುದನ್ನು ಬಿಟ್ಟು, ಅವರನ್ನು ಅತ್ಯಂತ ಕೀಳಾಗಿ ಕಂಡು, ಅವರಿಗೆ ಕನಿಷ್ಠ ಸೌಲಭ್ಯಗಳನ್ನೂ ಕಲ್ಪಿಸಿಕೊಟ್ಟಿಲ್ಲ. ಈ ರೀತಿಯ ಅವ್ಯವಸ್ಥೆ, ಗೊಂದಲಗಳಿಂದಾಗಿ ಅಲ್ಲಿಯ ರೈತರು ಬೇಸತ್ತು ನನಗೆ ಫೋನ್ ಮಾಡಿದ್ದರು. ಇವರು ನಡೆಸುವುದೇ ಒಂದೆರಡು ಕಾರ್ಯಕ್ರಮಗಳು. ಅದನ್ನೂ ಈ ರೀತಿ ನಡೆಸಿದರೆ, ಅಲ್ಲಿ ಈ ರೀತಿಯಾದರೆ, ಕೃಷಿ ಇಲಾಖೆಯಲ್ಲಿ ಹೇಗೆ ನಂಬಿಕೆಯನ್ನಿಡುವುದು ಎಂದು ಬಹಳ ಆಕ್ರೋಶಭರಿತರಾಗಿದ್ದಾರೆ. ಕಾಟಾಚಾರಕ್ಕೆ ಕರ್ನಾಟಕ ದರ್ಶನ ಮಾಡಿಸಬೇಕೆಂದು ಯಾರ್ಯಾರನ್ನೋ ಕೆರದುಕೊಂಡು ಹೋಗಿದ್ದಾರೆ. ಈ ರೀತಿಯ ಗೊಂದಲವನ್ನು ಸರಿಪಡಿಸುವಂತೆ ನಾನು ತಮ್ಮ ಮೂಲಕ ಕೃಷಿ ಸಚಿವರನ್ನು ಆಗ್ರಹಪಡಿಸುತ್ತೇನೆ. ನಿಜವಾಗಿ ಹಣ ಕೊಟ್ಟವರಿಗೆ ಯೋಗ್ಯ ವ್ಯವಸ್ಥೆ ಮಾಡಿ, ಕರ್ನಾಚಕ ದರ್ಶನಕ್ಕೆ ವ್ಯವಸ್ಥೆ ಮಾಡಿಸಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :— ನಾನೂ ಸಹ ಇಂದಿನ ಬೆಳಿಗ್ಗೆಯ ಪತ್ರಿಕೆಗಳಲ್ಲಿ ಓದಿದ್ದು, ಅದರ ಆದಾರದ ಮೇಲೆ ಹೇಳುವುದಾದರೆ, ಇವರು ಸೂಪರ್ ಲಕ್ಸುರಿ, ಡೀಲಕ್ಸ್ ಬಸ್ಸೆಂದು ತಿಳಿದುಕೊಂಡಿದ್ದಾರೆಂದು ಕಾಣುತ್ತದೆ.